ಡಾ: ಶಾಮನೂರು ಶಿವಶಂಕರಪ್ಪ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು)

(ಅ) ಅಂತಹ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಸೇತುವೆಗಳ ನಿರ್ಮಾಣ

901 (1505); ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

(ಅ) ಚಿಂಚೋಳಿ ತಾಲ್ಲೂಕಿನ ರಾಜ್ಯ ಹೆದ್ದಾರಿ–149 ರಲ್ಲಿ ಬರುವ ಚಿಂಚೋಳಿ ಹೆಚ್. ಹಳ್ಳ, ಕಲ್ಲಹಿಪ್ಪರಗಾ ಗ್ರಾಮದ ಹತ್ತಿರ ಬೆಣ್ಣೆತೋರಾ ಹಳ್ಳ ಹಾಗೂ ಚಿಂಚೋಳಿ ತಾಂಡೂರ ರಾಜ್ಯ ಹೆದ್ದಾರಿ ಮೇಲೆ ಬರುವ ಮಿರಿಯಾಣ ಗ್ರಾಮದ ಹತ್ತಿರ ಹಳ್ಳಗಳ ಸೇತುವೆಗಳು ಸಂಪೂರ್ಣವಾಗಿ ಹದಗೆಟ್ಟಿದ್ದು, ಇದರಿಂದ ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರಯಾಣ ಮಾಡಲು ತೀರಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ಎಲ್ಲಾ ಹಳ್ಳಿಗಳಿಗೆ ಸೇತುವೆಗಳನ್ನು ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಲಾಗಿದೆಯೇ; ಮಾಡದಿದ್ದಲ್ಲಿ, ಯಾವಾಗ ಬಿಡುಗಡೆ ಮಾಡಲಾಗುವುದು; ವಿವರ ನೀಡುವುದು?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಬಂದಿದೆ.

(ಆ) ಚಿಂಚೋಳಿ ತಾಲ್ಲೂಕಿನ ರಾಜ್ಯ ಹೆದ್ದಾರಿ–149ರ ಕಿ. ಮೀ. 125ರಲ್ಲಿ ಬರುವ ಚಿಂಚೋಳಿ ಹೆಚ್. ಹಳ್ಳದ ಸೇತುವೆ ನಿರ್ಮಿಸುವ ಪ್ರಸ್ತಾವನೆಗೆ ಕೆಆರ್‌ಡಿಸಿಎಲ್‌ನಿಂದ ಅಂದಾಜು ಪತ್ರಿಕೆಯನ್ನು, ತಯಾರಿಸಲಾಗುತ್ತಿದ್ದು, ಆಡಳಿತಾತ್ಮಕ ಅನುಮೋದನೆ ನೀಡುವ ಹಂತದಲ್ಲಿದೆ. ಇದೇ ರೀತಿ ಕಲ್ಲ ಹಿಪ್ಪರಗಾ ಗ್ರಾಮದ ಹತ್ತಿರ ಸೇತುವೆ ಪ್ರಸ್ತಾವನೆಯು ಸಹ ಪರಿಶೀಲನೆಯಲ್ಲಿದೆ.

ಚಿಂಚೋಳಿ ತಾಲ್ಲೂಕಿನ ರಾಜ್ಯ ಹೆದ್ದಾರಿ, ಅಂದರೆ ಆಂಧ್ರಪ್ರದೇಶ ಗಡಿಯಿಂದ ಮೆಹಬೂಬನಗರ, ವಾಯಾ ಚಿಂಚೋಳಿ ಸೇರುವ ರಸ್ತೆಯ ಅಭಿವೃದ್ಧಿ ಕಾಮಗಾರಿಯು ` 24.78 ಕೋಟಿಗೆ ಮಂಜೂರಾಗಿದ್ದು, ಈ ಕಾಮಗಾರಿಯಲ್ಲಿ ಒಟ್ಟು 15 ಕಿರು ಸೇತುವೆಗಳನ್ನು ನಿರ್ಮಿಸಲಾಗುತ್ತಿದ್ದು, ಮಿರಿಯಾಣ ಗ್ರಾಮದ ಹತ್ತಿರ ಹಳ್ಳದ ಸೇತುವೆ ಸಹ ಇದರಲ್ಲಿ ಸೇರಿರುತ್ತದೆ. ಇವುಗಳ ಪೈಕಿ 13 ಸೇತುವೆಗಳು ಪೂರ್ಣಗೊಂಡಿದ್ದು, ಬಾಕಿ ಉಳಿದ ಕಿರು ಸೇತುವೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಎಸ್ಕಾಂಗಳಿಗೆ ಹಂಚಿಕೆ ಮಾಡುತ್ತಿರುವ ವಿದ್ಯುತ್

902 (1792); ಶ್ರೀ ಈಶ್ವರ್ ಭೀಮಣ್ಣಖಂಡ್ರೆ (ಭಾಲ್ಕಿ)

(ಅ) ರಾಜ್ಯದಲ್ಲಿ ಉತ್ಪಾದನೆಯಾದ ವಿದ್ಯುತ್ತನ್ನು ವಿವಿಧ ವಿಭಾಗಗಳ ಎಸ್ಕಾಂಗಳಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಲಾಗುತ್ತದೆ; ಹಾಗೂ ಯೂನಿಟ್‌ಗೆ ಎಷ್ಟು ದರ ನಿಗದಿ ಮಾಡಲಾಗಿದೆ;

(ಆ) ರಾಜ್ಯದಲ್ಲಿರುವ 5 ಎಸ್ಕಾಂಗಳು ಎಷ್ಟು ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ; ಹಾಗೂ ಈ ನಷ್ಟಕ್ಕೆ ಕಾರಣವೇನು; ಯಾರು ಜವಾಬ್ದಾರರು; ವಿವರ ಒದಗಿಸುವುದು?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ರಾಜ್ಯದಲ್ಲಿ ಉತ್ಪಾದನೆಯಾದ ವಿದ್ಯುತ್ತನ್ನು ವಿವಿಧ ವಿಭಾಗಗಳ ಎಸ್ಕಾಂಗಳಿಗೆ ಸರ್ಕಾರಿ ಆದೇಶ ದಿನಾಂಕ: 31.05.2014ರ ಅನ್ವಯ ಈ ಕೆಳಗಿನ ಪ್ರಮಾಣದಲ್ಲಿ ಹಂಚಿಕೆ ಮಾಡಲಾಗಿದೆ.

ಕಂಪನಿಯ ಹೆಸರು	ಸರಾಸರಿ ಶೇಕಡಾವಾರು ವಿದ್ಯುತ್ ಹಂಚಿಕೆ ಪ್ರಮಾಣ
ಬೆಸ್ಕಾಂ	48.72%